ಮಧುಗಿರಿಯ ಪ್ರಧಾನ ಹಿರಿಯ ಸಿವಿಲ್ ಜಡ್ಜ್ ಮತ್ತು ಜೆಎಂಎಫ್‌ಸಿ ನ್ಯಾಯಾಲಯದಲ್ಲಿ

**ಸಿ.ಸಿ. ಸಂಖ್ಯೆ: 22/2026**

ಪ್ರ.ವ.ಬೋ.ತಾಃ 09-07-2026

ಚಾಸಾಃ 2 ಫ್ರಾಸಾಃ 3

| | |
|---|---|
| ಸಾಕ್ಷಿಯ ಹೆಸರು | ಸಂತೋಷ್ ಕುಮಾರ್ |
| ತಂದೆ/ಗಂಡನ ಹೆಸರು | ಕೃಷ್ಣಾರೆಡ್ಡಿ |
| ವಯಸ್ಸು | 40 ವರ್ಷ |
| ವೃತ್ತಿ | ವ್ಯವಸಾಯ |
| ವಾಸ | ಬಡಚೌಡನಹಳ್ಳಿ, ಮಧುಗಿರಿ ತಾ. |

**ಮುಖ್ಯ ವಿಚಾರಣೆಃ- ಮಾನ್ಯ ಸ.ಸ.ಅ. ರವರಿಂದಃ-**

ನನಗೆ ಆರೋಪಿ ಗೊತ್ತು. ಚಾ.ಸಾ.1, 3 ಮತ್ತು 4 ರವರು ಗೊತ್ತು. ಕಳೆದ 2 ರಿಂದ 3 ತಿಂಗಳ ಹಿಂದೆ ಸಂಜೆ 5 ರಿಂದ 6 ಗಂಟೆ ಸಮಯದಲ್ಲಿ ಆರೋಪಿ ಚಾ.ಸಾ.1 ರವರ ಮನೆಯ ಬಳಿ ಬಂದು ಹಣಕಾಸಿನ ವಿಚಾರವಾಗಿ ಗಲಾಟೆ ಮಾಡಿ ಚಾ.ಸಾ.1 ರವರ ಮನೆಗೆ ಅಕ್ರಮ ಪ್ರವೇಶ ಮಾಡಿ ಚಾಸಾ.1 ರವರಿಗೆ ದೊಣ್ಣೆಯಿಂದ ಕಾಲಿಗೆ ಮತ್ತು ಹೊಟ್ಟೆಗೆ ಹೊಡೆದರು. ಈ ಗಲಾಟೆಯನ್ನು ನಾನು, ಚಾ.ಸಾ.3 ಮತ್ತು 4 ರವರು ಬಿಡಿಸಿದೆವು. ಈ ಬಗ್ಗೆ ನಾನು ಪೊಲೀಸರ ಮುಂದೆ ಹೇಳಿಕೆಯನ್ನು ನೀಡಿರುತ್ತೇನೆ. ಆ ದಿನ ಆರೋಪಿ ಹಲ್ಲೆಗೆ ಬಳಸಿದ ದೊಣ್ಣೆಯನ್ನು ನೋಡಿದರೆ ಗುರುತಿಸುತ್ತೇನೆ. ಅದನ್ನು ಈಗಾಗಲೇ ಮು.ಮಾ.1 ಎಂದು ಗುರುತಿಸಲಾಗಿದೆ.

(ಈ ಹಂತದಲ್ಲಿ ಮಾನ್ಯ ಸಸಅ ರವರ ವಿನಂತಿ ಮೇರೆಗೆ ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿ ನೀಡಲಾಯಿತು)

**<u>ಪಾಟೀ ಸವಾಲುಃ</u>– ಮಾನ್ಯ ಸ.ಸ.ಅ. ರವರಿಂದಃ–**

ದಿಃ 20.10.2025 ರಂದು ಸಂಜೆ 6.30 ಗಂಟೆ ಸಮಯದಲ್ಲಿ ಚಾ.ಸಾ.1 ರವರು ತಮ್ಮ ಕುರಿ ಶೆಡ್ ಹತ್ತಿರ ಇದ್ದಾಗ ಆರೋಪಿ ಅಲ್ಲಿಗೆ ಬಂದು ಹಣಕಾಸಿನ ವಿಚಾರವಾಗಿ ಗಲಾಟೆ ಮಾಡಿದರು ಎಂದರೆ ಸರಿ. ಆರೋಪಿ ಚಾ.ಸಾ.1 ರವರಿಗೆ ಅವ್ಯಾಚ ಶಬ್ದಗಳಿಂದ ಬೈಯ್ದು ನ್ಯಾಯಾಲಯದ ಮುಂದಿರುವ ಅಗಸೆ ಕಡ್ಡಿಯಿಂದ ಚಾ.ಸಾ.1 ರವರ ಬೆನ್ನಿಗೆ, ಎಡಗಾಲಿಗೆ ಮತ್ತು ಬಲಗಾಲಿಗೆ ಹೊಡೆದರು ಎಂದರೆ ಸರಿ. ಆ ನಂತರ ಚಾ.ಸಾ.1 ರವರು ತಮ್ಮ ಶೆಡ್ ಗೆ ಓಡಿ ಹೋಗಿದ್ದು ಆ ಸಮಯದಲ್ಲಿ ಆರೋಪಿ ಆ ಶೆಡ್ ನ ಒಳಗಡೆ ಹೋಗಿ ಎಳೆದುಕೊಂಡು ಬಂದು ಜೀವ ಬೆದರಿಕೆ ಹಾಕಿದರು ಎಂದರೆ ಸರಿ.

**<u>ಪಾಟೀ ಸವಾಲುಃ</u>– ಆರೋಪಿತರ ಪರವಾಗಿ ಶ್ರೀ.ಎಂ.ಸಿ.ಎಂ. ವಕೀಲರಿಂದಃ–**

ನಾನು ಎಸ್.ಎಸ್.ಎಲ್.ಸಿ.ವರೆಗೆ ವಿದ್ಯಾಭ್ಯಾಸ ಮಾಡಿರುತ್ತೇನೆ. ನಾನು ವ್ಯವಸಾಯದ ಜೊತೆಗೆ ಸಣ್ಣ ಪುಟ್ಟ ಕಂಟ್ರಾಕ್ಟರ್ ಕೆಲಸ ಮಾಡಿಸುತ್ತೇನೆ. ನಾನು ನನ್ನ ಕಂಟ್ರಾಕ್ಟರ್ ಕೆಲಸದ ನಿಮಿತ್ತ ಜಿಲ್ಲಾ ಪಂಚಾಯತ್ ಮತ್ತು ಲೊಕೋಪಯೋಗಿ ಕಚೇರಿಗಳಿಗೆ ಹೋಗುತ್ತಿರುತ್ತೇನೆ ಎಂದರೆ ಸರಿ. ನಾನು ಕೆಲಸವಿದ್ದ ಸಮಯದಲ್ಲಿ ಬೆಳಗ್ಗೆ 10 ಗಂಟೆಗೆ ಮನೆಯಿಂದ ಹೊರಟು ರಾತ್ರಿ 10 ಗಂಟೆಗೆ ವಾಪಸ್ಸು ಬರುತ್ತೇನೆ ಎಂದರೆ ಸರಿ. ಚಾ.ಸಾ.1 ರವರ ಮನೆಯ

ಹಿಂಭಾಗದಲ್ಲಿಯೇ ಇದೆ. ಚಾ.ಸಾ.1ರವರ ಗಂಡ ನಮ್ಮ ಜಮೀನುಗಳಿಗೆ ಕೆಲಸ ಮಾಡಲು ಬರುತ್ತಾರೆ. ನನ್ನ ಹಾಗೂ ಚಾ.ಸಾ.1ರವರ ಕುಟುಂಬಗಳ ನಡುವೆ ಬಹಳ ವಿಶ್ವಾಸವಿದೆ ಎಂದರೆ ಸರಿ. ಗಲಾಟೆಯಾದಾಗ ಆ ಸ್ಥಳದಲ್ಲಿ ಸುಮಾರು 5-6 ಜನ ಇದ್ದರು. ಆ ಗಲಾಟೆಯು ಸುಮಾರು ಒಂದು ಕಾಲು ಗಂಟೆಯವರೆಗೂ ನಡೆಯಿತು. ಆ 5-6 ಜನರ ಹೆಸರು ನನಗೆ ಗೊತ್ತಿಲ್ಲ. ಆ ದಿನ ಆರೋಪಿ ಚಾ.ಸಾ.1ರವರ ಮನೆಗೆ ಅಕ್ರಮ ಪ್ರವೇಶ ಮಾಡಿ ಗಲಾಟೆ ಮಾಡಿಲ್ಲ, ಅವ್ಯಾಚ ಶಬ್ದಗಳಿಂದ ಬೈಯ್ದಿಲ್ಲ, ಕೊಲೆ ಬೆದರಿಕೆ ಹಾಕಿಲ್ಲ, ಅಗಸೆ ಕಡ್ಡಿಯಿಂದ ಹಲ್ಲೆ ಮಾಡಿಲ್ಲ ಎಂದರೆ ಸರಿಯಲ್ಲ. ನಾನು ಚಾ.ಸಾ.1ರವರ ಮಾತು ಕೇಳಿ ಆರೋಪಿ ವಿರುದ್ದ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಚಾ.ಸಾ.1ರವರ ಮನೆಯ ಅಕ್ಕ ಪಕ್ಕ ಮತ್ತು ಮುಂಭಾಗದಲ್ಲಿ ವಾಸದ ಮನೆಗಳು ಇವೆ. ಆ ಮನೆಗಳಲ್ಲಿ ಜನರು ವಾಸಿಸುತ್ತಿದ್ದಾರೆ ಎಂದರೆ ಸರಿ. ಆ ದಿನ ಆ ಕುರಿ ಶೆಡ್ ಹತ್ತಿರ ಯಾವುದೇ ಗಲಾಟೆ ಆಗಿಲ್ಲ ಎಂದರೆ ಸರಿಯಲ್ಲ. ಆ ಕುರಿ ಶೆಡ್ ಹತ್ತಿರ ಗಲಾಟೆಯಾದ ಸಮಯದಲ್ಲಿ ನಾನು ಸಹ ಸ್ಥಳದಲ್ಲಿ ಇದ್ದೆನು. ಆ ಶೆಡ್ ನ ಬಾಗಿಲು ಉತ್ತರ ದಿಕ್ಕಿಗೆ ಇದೆ. ಆ ಶೆಡ್ ನ ಅಕ್ಕ ಪಕ್ಕದಲ್ಲಿ ವಾಸ ಮನೆಗಳಿದ್ದು ಜನರು ವಾಸಿಸುತ್ತಿದ್ದಾರೆ.

ಆ ಶೆಡ್ ನ ಮುಂಭಾಗದಲ್ಲಿ ಬಡಚೌಡನಹಳ್ಳಿ ಮತ್ತು ಹುಣಸವಾಡಿಗೆ ಹೋಗಲು ಮಣ್ಣಿನ ರಸ್ತೆ ಇದೆ ಎಂದರೆ ಸರಿ. ಆ ರಸ್ತೆಯಲ್ಲಿ ಸಾರ್ವಜನಿಕರು ಓಡಾಡುತ್ತಿರುತ್ತಾರೆ ಎಂದರೆ ಸರಿ. ಆ ದೊಣ್ಣೆಯ ಮೇಲೆ ಯಜಾವುದೇ ವಿಶೇಷವಾದ ಗುರುತನ್ನು ಇಟ್ಟುಕೊಂಡಿಲ್ಲ ಆದರೆ ಅದೇ ದೊಣ್ಣೆಯಿಂದ ಹಲ್ಲೆ ಮಾಡಿದ್ದಾರೆ ಎಂದು ಸ್ವತಃ ನುಡಿಯುತ್ತಾರೆ. ಆ ದಿನ

ಆರೋಪಿ ಆ ಅಗಸೆ ಕಡ್ಡಿಯಿಂದ ಚಾ.ಸಾ.1ರವರಿಗೆ ಹಲ್ಲೆ ಮಾಡಿಲ್ಲ, ನಾನು ಚಾ.ಸಾ.1ರವರ ಮಾತು ಕೇಳಿ ಸುಳ್ಳು ಸಾಕ್ಷ್ಯನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಈ ದಿನ ನನ್ನನ್ನು ಸಾಕ್ಷ್ಯ ನುಡಿಯಲು ಚಾ.ಸಾ.1ರವರೇ ಕರೆದುಕೊಂಡು ಬಂದಿದ್ದಾರೆ ಎಂದರೆ ಸರಿಯಲ್ಲ. ಆ ಸ್ಥಳದಲ್ಲಿ ನಾನು ಇರಲಿಲ್ಲ ಎಂದರೆ ಸರಿಯಲ್ಲ.

ಮರು ವಿಚಾರಣೆಃ- ಇಲ್ಲಾ.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ನುಡಿದಂತೆ ಗಣಕೀಕೃತಗೊಳಿಸಲಾಯಿತು)

ಓ.ಹೇ.ಸಾ.ಸ.ಇ.ಒ.

ಪ್ರಧಾನ ಹಿರಿಯ ಸಿವಿಲ್ ಜಡ್ಜ್
ಮತ್ತು ಜೆಎಂಎಫ್‌ಸಿ, ಮಧುಗಿರಿ